ಕರ್ನಾಟಕ ವಿಧಾನ ಪರಿಷತ್ತು

U/S
16/9/2021

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 398 (629) |
| ಮಾನ್ಯ ಸದಸ್ಯರ ಹೆಸರು | ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 16/09/2021 |
| ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

<table>
<tr><th>ಕ್ರ ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೀದರ ಜಿಲ್ಲೆಯ ಕಟ್ಟಡ ಕಾರ್ಮಿಕರು/ ಕಾರ್ಮಿಕರ ಒಟ್ಟು ಸಂಖ್ಯೆ (ತಾಲ್ಲೂಕುವಾರು ವಿವರ ನೀಡುವುದು)</td><td>
ಬೀದರ ಜಿಲ್ಲೆಯ ಕಟ್ಟಡ ಕಾರ್ಮಿಕರ ತಾಲ್ಲೂಕುವಾರು ವಿವರಗಳನ್ನು ಈ ಕೆಳಗಿನಂತೆ ಒದಗಿಸಲಾಗಿದೆ.
<table>
<tr><th>ಕ್ರ.ಸಂ</th><th>ತಾಲ್ಲೂಕು</th><th>ನೋಂದಾಯಿತರಾದ ಕಟ್ಟಡ ಕಾರ್ಮಿಕರ ಸಂಖ್ಯೆ</th></tr>
<tr><td>1</td><td>ಔರಾದ್</td><td>15,772</td></tr>
<tr><td>2</td><td>ಬೀದರ್</td><td>35,622</td></tr>
<tr><td>3</td><td>ಬಾಲ್ಕಿ</td><td>17,075</td></tr>
<tr><td>4</td><td>ಹುಮನಾಬಾದ್</td><td>18,725</td></tr>
<tr><td>5</td><td>ಬಸವಕಲ್ಯಾಣ</td><td>12,826</td></tr>
<tr><td></td><td>ಒಟ್ಟು</td><td>1,00,020</td></tr>
</table>
1. <u>ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:-</u><br>
ಅಸಂಘಟಿತ ಕಾರ್ಮಿಕರ ಸಂಖ್ಯೆಗೆ ಸಂಬಂಧಿಸಿದಂತೆ ಈವರೆಗೆ ಕಾರ್ಮಿಕ ಇಲಾಖೆಯಿಂದ ಯಾವುದೇ ಸಮೀಕ್ಷೆ ನಡೆಸಿರುವುದಿಲ್ಲ. ಆದ್ದರಿಂದ ಅಸಂಘಟಿತ ಕಾರ್ಮಿಕರ ನಿಖರವಾದ ಅಂಕಿ ಅಂಶಗಳು ಲಭ್ಯವಿರುವುದಿಲ್ಲ. ಆದರೆ, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಜಾರಿಗೊಳಿಸುತ್ತಿರುವ ವಿವಿಧ ಯೋಜನೆಗಳಡಿ ಫಲಾನುಭವಿಗಳಾಗಿ ನೋಂದಾಯಿತರಾದ ಕಾರ್ಮಿಕರ ಮಾಹಿತಿಯು ಲಭ್ಯವಿರುತ್ತದೆ.<br><br>
ಬೀದರ್ ಜಿಲ್ಲೆಗೆ ಸಂಬಂಧಿಸಿದ ಅಸಂಘಟಿತ ಕಾರ್ಮಿಕರ ಸಂಖ್ಯೆ ವಿವರ ಈ ಕೆಳಕಂಡಂತಿದೆ.<br><br>
1. ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ:<br>
ಸಾರಿಗೆ ಇಲಾಖೆಯು ಒದಗಿಸಿರುವ ದತ್ತಾಂಶದ ಪ್ರಕಾರ ರಾಜ್ಯದಲ್ಲಿ ಊರ್ಜಿತ ಖಾಸಗಿ ವಾಣಿಜ್ಯ ಸಾರಿಗೆ ವಾಹನ ಚಾಲನಾ ಪರವಾನಗಿ ಹೊಂದಿರುವ 9,12,100 ಚಾಲಕರಿದ್ದು, ಅದರಲ್ಲಿ ಸರ್ಕಾರಿ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಚಾಲಕರನ್ನು ಹೊರತುಪಡಿಸಿ ಉಳಿದ 8,40,561 ಚಾಲಕರನ್ನು ಈ ಯೋಜನೆಯಡಿ ಫಲಾನುಭವಿಗಳೆಂದು ಪರಿಗಣಿಸಲಾಗಿದೆ. ಸದರಿ ದತ್ತಾಂಶದನ್ವಯ ಬೀದರ್
</td></tr>
</table>

ಜಿಲ್ಲೆಯಲ್ಲಿ ಒಟ್ಟು **25,332** ಚಾಲಕರನ್ನು ಈ ಯೋಜನೆಯಡಿ ಫಲಾನುಭವಿಗಳೆಂದು ಪರಿಗಣಿಸಲಾಗಿದ್ದು, ತಾಲ್ಲೂಕುವಾರು ಮಾಹಿತಿ ಕೆಳಗಿನಂತಿದೆ:

| ಕ್ರ ಸಂ | ತಾಲ್ಲೂಕು | ಫಲಾನುಭವಿಗಳ ಸಂಖ್ಯೆ |
|---|---|---|
| 1 | ಔರಾದ್ | 2,615 |
| 2 | ಬಸವಕಲ್ಯಾಣ | 5,126 |
| 3 | ಭಾಲ್ಕಿ | 3,084 |
| 4 | ಬೀದರ್ | 9,285 |
| 5 | ಹುಮ್ನಾಬಾದ್ | 5,222 |
| | ಒಟ್ಟು | **25,332** |

**1. ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ:**

ಈ ಯೋಜನೆಯಡಿ ಬೀದರ್ ಜಿಲ್ಲೆಯಲ್ಲಿ ಪ್ರಸ್ತುತ ಅಸಂಘಟಿತ ವಲಯದ 11 ವರ್ಗಗಳ ಕಾರ್ಮಿಕರಾದ ಹಮಾಲರು, ಗೃಹ ಕಾರ್ಮಿಕರು, ಚಿಂದಿ ಆಯುವವರು, ಟೈಲರ್‌ಗಳು, ಮೆಕ್ಯಾನಿಕ್ಸ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕ ವೃತ್ತಿಯ 3,019 ಅಸಂಘಟಿತ ಕಾರ್ಮಿಕರನ್ನು ನೋಂದಾಯಿಸಲಾಗಿದ್ದು, ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ:

| ಕ್ರ ಸಂ | ತಾಲ್ಲೂಕು | ಫಲಾನುಭವಿಗಳ ಸಂಖ್ಯೆ |
|---|---|---|
| 1 | ಔರಾದ | 66 |
| 2 | ಬಸವ ಕಲ್ಯಾಣ | 855 |
| 3 | ಭಾಲ್ಕಿ | 402 |
| 4 | ಬೀದರ್ | 1,215 |
| 5 | ಹುಮನಾಬಾದ | 481 |
| | ಒಟ್ಟು | **3,019** |

**2. ಕೋವಿಡ್–19ರ ವಿಶೇಷ ಪ್ಯಾಕೇಜ್:–**

➢ 2020ನೇ ವರ್ಷದಲ್ಲಿ, ಕೋವಿಡ್–19ರ, ಮೊದಲನೇ ಅಲೆಯ ಲಾಕ್‌ಡೌನ್ ಕಾರಣ ಸಂಕಷ್ಟಕ್ಕೊಳಗಾದ ಅಗಸರು ಮತ್ತು ಕ್ಷೌರಿಕರಿಗೆ ವೃತ್ತಿ ಕಾರ್ಮಿಕರಿಗೆ ಸನ್ಮಾನ್ಯ ಮುಖ್ಯಮಂತ್ರಿಯವರು ಘೋಷಿಸಿದ ವಿಶೇಷ ಪ್ಯಾಕೇಜ್ ಅಡಿ ಒಂದು ಬಾರಿಯ ರೂ.5,000/–ಗಳ ನೆರವನ್ನು ಕೋರಿ ರಾಜ್ಯದಾದ್ಯಂತ ಒಟ್ಟು ಕಾರ್ಮಿಕರು ಅರ್ಜಿ ಸಲ್ಲಿಸಿರುತ್ತಾರೆ. ಬೀದರ್ ಜಿಲ್ಲೆಯಲ್ಲಿ 3,881 ಕಾರ್ಮಿಕರು ಅರ್ಜಿ ಸಲ್ಲಿಸಿದ್ದು, ಸದರಿ ಕಾರ್ಮಿಕರ ದತ್ತಾಂಶ ಲಭ್ಯವಿದ್ದು, ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ:

| ಕ್ರ ಸಂ | ತಾಲ್ಲೂಕು | ಫಲಾನುಭವಿಗಳ ಸಂಖ್ಯೆ |
|---|---|---|
| 1 | ಔರಾದ್ | 354 |
| 2 | ಬಸವಕಲ್ಯಾಣ | 603 |
| 3 | ಭಾಲ್ಕಿ | 581 |
| 4 | ಬೀದರ್ | 1,193 |
| 5 | ಚಿತ್ತಗುಪ್ಪ | 240 |

| | | |
|---|---|---|
| 6 | ಹುಮ್ನಾಬಾದ್ | 627 |
| 7 | ಹುಲ್ಸೂರು | 95 |
| 8 | ಕಮಲಾನಗರ | 188 |
| | ಒಟ್ಟು | **3,881** |

2021ರಲ್ಲಿ ಕೋವಿಡ್-19 ಸಾಂಕ್ರಾಮಿಕ ಪರಿಣಾಮ 2ನೇ ಅಲೆಯ ಲಾಕ್‌ಡೌನ್ ಕಾರಣ ಸಂಕಷ್ಟಕ್ಕೊಳಗಾದ ಅಸಂಘಟಿತ ವಲಯದ 11 ವರ್ಗಗಳಾದ "ಹಮಾಲರು, ಮನೆಗೆಲಸದವರು, ಚಿಂದಿ ಆಯುವವರು, ಟೈಲರ್ಸ್, ಮೆಕ್ಯಾನಿಕ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕ" ವೃತ್ತಿ ನಿರ್ವಹಿಸುತ್ತಿರುವ ಅಸಂಘಟಿತ ಕಾರ್ಮಿಕರಿಗೆ ಸನ್ಮಾನ್ಯ ಮುಖ್ಯಮಂತ್ರಿಯವರು ಘೋಷಿಸಿದ ವಿಶೇಷ ಪ್ಯಾಕೇಜ್ ಅಡಿ ಒಂದು ಬಾರಿಯ ರೂ.2,000/- ಗಳ ನೆರವನ್ನು ಕೋರಿ ಸೇವಾ ಸಿಂಧು ಪೋರ್ಟಲ್ ಮೂಲಕ 14,52,943 ಕಾರ್ಮಿಕರು ಅರ್ಜಿ ಸಲ್ಲಿಸಿರುತ್ತಾರೆ. ಬೀದರ್ ಜಿಲ್ಲೆಗೆ ಸಂಬಂಧಿಸಿದಂತೆ 56,827 ಕಾರ್ಮಿಕರು ಅರ್ಜಿ ಸಲ್ಲಿಸಿದ್ದು, ಸದರಿ ಕಾರ್ಮಿಕರ ದತ್ತಾಂಶ ಲಭ್ಯವಿದ್ದು, ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ:

| ಕ್ರ. ಸಂ. | ತಾಲ್ಲೂಕು | ಫಲಾನುಭವಿಗಳ ಸಂಖ್ಯೆ |
|---|---|---|
| 1 | ಔರಾದ್ | 4,226 |
| 2 | ಬಸವಕಲ್ಯಾಣ | 15,989 |
| 3 | ಭಾಲ್ಕಿ | 2,966 |
| 4 | ಬೀದರ್ | 15,261 |
| 5 | ಚಿತ್ತಗುಪ್ಪ | 6,431 |
| 6 | ಹುಮ್ನಾಬಾದ್ | 7,485 |
| 7 | ಹುಲ್ಸೂರು | 1,170 |
| 8 | ಕಮಲಾನಗರ | 3,299 |
| | ಒಟ್ಟು | **56,827** |

**2. ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ**

ಈ ಮಂಡಳಿಯಲ್ಲಿ ಕಾರ್ಮಿಕರ ನೊಂದಣಿ ವ್ಯವಸ್ಥೆಇರುವುದಿಲ್ಲ. ಆದರೆ ಮಂಡಳಿಗೆ ರೂ. 20:40ರ ಅನುಪಾತದಲ್ಲಿ ವಂತಿಗೆ ಪಾವತಿಸುವ ಸಂಘಟಿತ ಕಾರ್ಮಿಕರು ಮಂಡಳಿಯ ವ್ಯಾಪ್ತಿಗೆ ಒಳಪಡುತ್ತಾರೆ. ಬೀದರ್ ಜಿಲ್ಲೆಯಲ್ಲಿ ಒಟ್ಟು 5,037 ಸಂಘಟಿತ ಕಾರ್ಮಿಕರಿದ್ದಾರೆ. ತಾಲ್ಲೂಕುವಾರು ಮಾಹಿತಿ ಲಭ್ಯವಿರುವುದಿಲ್ಲ.

| | | |
|---|---|---|
| ಆ) | ಕಾರ್ಮಿಕರಿಗೆ ಅನುಕೂಲವಾಗುವಂತೆ ರೂಪಿಸಿರುವ ಯೋಜನೆಗಳಾವವು; ಎಷ್ಟು ಕಾರ್ಮಿಕರಿಗೆ ಅನುಕೂಲ ಮಾಡಿ ಕೊಡಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು) | **I. ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:-**<br>ಕಟ್ಟಡ ಕಾರ್ಮಿಕರಿಗೆ ಅನುಕೂಲವಾಗುವಂತೆ ಮಂಡಳಿಯು 19 ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಈ ಯೋಜನೆಗಳ ಮಾಹಿತಿಯನ್ನು **ಅನುಬಂಧ-1 ರಲ್ಲಿ** ಲಗತ್ತಿಸಿದೆ. |

ಬೀದರ್ ಜಿಲ್ಲೆಯಲ್ಲಿ ಮಂಡಳಿಯಿಂದ ಸೌಲಭ್ಯ ಪಡೆದ ಕಾರ್ಮಿಕರ ಸಂಖ್ಯೆಯನ್ನು ಕಾರ್ಮಿಕ ನಿರೀಕ್ಷಕರ ವೃತ್ತವಾರು **ಅನುಬಂಧ-2ರಲ್ಲಿ** ಲಗತ್ತಿಸಿದೆ.

**II. ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:-**

ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸಲು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.

(1) **ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ:-** ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರಿಗೆ ಸಂಬಂಧಪಟ್ಟಂತೆ ಯೋಜನೆಯಡಿ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ.

(ಅ) **ಅಪಘಾತ ಪರಿಹಾರ ಸೌಲಭ್ಯ:** ಯೋಜನೆಯಡಿ, ಅಪಘಾತದಿಂದಾಗಿ ಮರಣ ಹೊಂದಿದ ಪ್ರಕರಣಗಳಲ್ಲಿ ರೂ. 5 ಲಕ್ಷದ ಪರಿಹಾರ, ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದ ಪ್ರಕರಣಗಳಲ್ಲಿ ರೂ. 2 ಲಕ್ಷದ ಪರಿಹಾರ ಮತ್ತು ಒಳರೋಗಿಯಾಗಿ ಚಿಕಿತ್ಸೆ ಪಡೆದಲ್ಲಿ ರೂ.1 ಲಕ್ಷದವರೆಗೂ ಚಿಕಿತ್ಸಾ ವೆಚ್ಚದ ಮರುಪಾವತಿ ನೀಡಲಾಗುತ್ತಿದೆ. ಬೀದರ್ ಜಿಲ್ಲೆಯಲ್ಲಿ ಈವರೆಗೆ 9 ಪ್ರಕರಣಗಳಲ್ಲಿ ರೂ. 33,87,466/- ಗಳ ಪರಿಹಾರ ವಿತರಿಸಲಾಗಿದ್ದು, ತಾಲ್ಲೂಕುವಾರು ಮಾಹಿತಿ ಕೆಳಗಿನಂತಿದೆ:

| ಕ್ರ ಸಂ | ತಾಲ್ಲೂಕು | ಫಲಾನುಭವಿಗಳ ಸಂಖ್ಯೆ | ಮೊತ್ತ |
|---|---|---|---|
| 1 | ಔರಾದ | - | - |
| 2 | ಬಸವ ಕಲ್ಯಾಣ | 2 | 5,43,733 |
| 3 | ಭಾಲ್ಕಿ | - | - |
| 4 | ಬೀದರ್ | 5 | 16,00,000 |
| 5 | ಹುಮನಾಬಾದ | 2 | 7,00,000 |
| | **ಒಟ್ಟು** | **9** | **33,87,466** |

(ಆ) **ಶೈಕ್ಷಣಿಕ ಧನ ಸಹಾಯ:** ಅಪಘಾತದ ಕಾರಣ ನಿಧನರಾದ ಅಥವಾ ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದ ಫಲಾನುಭವಿಗಳ ಇಬ್ಬರು ಮಕ್ಕಳಿಗೆ ಪದವಿ ಪೂರ್ವ ವ್ಯಾಸಂಗದವರೆಗೆ ವಾರ್ಷಿಕ ರೂ.10,000/-ಗಳ ಶೈಕ್ಷಣಿಕ ಸಹಾಯಧನ ನೀಡಲಾಗುತ್ತಿದೆ. ಬೀದರ್ ಜಿಲ್ಲೆಯಲ್ಲಿ ಈವರೆಗೆ 8 ಮಕ್ಕಳಿಗೆ ರೂ. 80,000/- ಗಳ ಪರಿಹಾರ ವಿತರಿಸಲಾಗಿದ್ದು, ತಾಲ್ಲೂಕುವಾರು ಮಾಹಿತಿ ಕೆಳಗಿನಂತಿದೆ:

| ಕ್ರ ಸಂ | ತಾಲ್ಲೂಕು | ಫಲಾನುಭವಿಗಳ ಸಂಖ್ಯೆ | ಮೊತ್ತ |
|---|---|---|---|
| 1 | ಔರಾದ | – | – |
| 2 | ಬಸವ ಕಲ್ಯಾಣ | – | – |
| 3 | ಭಾಲ್ಕಿ | 2 | 20,000 |
| 4 | ಬೀದರ್ | – | – |
| 5 | ಹುಮನಾಬಾದ | 6 | 60,000 |
| | **ಒಟ್ಟು** | **8** | **80,000** |

**(2) ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ:–**

- **"ಸ್ಮಾರ್ಟ್‌ಕಾರ್ಡ್"**: ಈ ಯೋಜನೆಯಡಿ ಅಸಂಘಟಿತ ವಲಯದ 11 ಅಸಂಘಟಿತ ವರ್ಗಗಳಾದ "ಹಮಾಲರು, ಮನೆಗೆಲಸದವರು, ಚಿಂದಿ ಆಯುವವರು, ಟೈಲರ್ಸ್, ಮೆಕ್ಯಾನಿಕ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿಕಾರ್ಮಿಕ" ರನ್ನು ನೋಂದಾಯಿಸಿ ಸ್ಮಾರ್ಟ್‌ಕಾರ್ಡ್ ವಿತರಿಸಲಾಗುತ್ತಿದೆ. ಬೀದರ್ ಜಿಲ್ಲೆಯಲ್ಲಿ ಈವರೆಗೆ 3,019 ಕಾರ್ಮಿಕರನ್ನು ನೋಂದಾಯಿಸಲಾಗಿದೆ, ತಾಲ್ಲೂಕುವಾರು ಮಾಹಿತಿ ಈ ಕೆಳಗಿನಂತಿದೆ:

| ಕ್ರ ಸಂ | ತಾಲ್ಲೂಕು | ಫಲಾನುಭವಿಗಳ ಸಂಖ್ಯೆ |
|---|---|---|
| 1 | ಔರಾದ | 66 |
| 2 | ಬಸವ ಕಲ್ಯಾಣ | 855 |
| 3 | ಭಾಲ್ಕಿ | 402 |
| 4 | ಬೀದರ್ | 1,215 |
| 5 | ಹುಮನಾಬಾದ | 481 |
| | **ಒಟ್ಟು** | **3,019** |

| | | |
|---|---|---|
| ಇ) | ಕಾರ್ಮಿಕರಿಗೆ ಸ್ಪಂದಿಸಲು ಇಲಾಖೆಯಲ್ಲಿ ಸಿಬ್ಬಂದಿ ಕೊರತೆಯಿದೆಯೇ: ಇದ್ದರೆ ಹುದ್ದೆಗಳು ಖಾಲಿ ಇದ್ದಲ್ಲಿ ಭರ್ತಿ ಮಾಡುವ ಪ್ರಕ್ರಿಯೆಯಾವಾಗ ಪ್ರಾರಂಭಿಸಲಾಗುವುದು? (ತಾಲ್ಲೂಕುವಾರು ವಿವರ ನೀಡುವುದು) | ಸದರಿ ವಿವರವನ್ನು **ಅನುಬಂಧ–2** ಮತ್ತು **ಅನುಬಂಧ–3**ರಲ್ಲಿ ಲಗತ್ತಿಸಿದೆ. |

**ಕಾಇ 382 ಎಲ್‌ಇಟಿ 2021**

(ಅರಬೈಲ್ ಶಿವರಾಂ ಹೆಬ್ಬಾರ್)
**ಕಾರ್ಮಿಕ ಸಚಿವರು**

# ಅನುಬಂಧ-01

## ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

| ಕ್ರ.ಸಂ | ಸೌಲಭ್ಯಗಳು | ಔರಾದ್ | ಬೀದರ್ | ಹುಮನಾಬಾದ್ | ಬಸವಕಲ್ಯಾಣ | ಬಾಲ್ಕಿ |
|---|---|---|---|---|---|---|
| 1 | ಮದುವೆಧನ ಸಹಾಯ | 152 | 1212 | 196 | 42 | 245 |
| 2 | ಹೆರಿಗೆಧನ ಸಹಾಯ | 37 | 352 | 30 | – | 33 |
| 3 | ಶೈಕ್ಷಣಿಕಧನ ಸಹಾಯ | 1373 | 6515 | 846 | 206 | 1151 |
| 4 | ತಾಯಿ ಮಗು ಸಹಾಯ ಹಸ್ತ | 01 | 07 | – | – | – |
| 5 | ಅಂತಿಮ ಸಂಸ್ಕಾರ ವೆಚ್ಚ ಮತ್ತು ಅನುಗ್ರಹ ರಾಶಿ | 27 | 304 | 44 | 13 | 44 |
| 6 | ವೈದ್ಯಕೀಯ ವೆಚ್ಚ ಮರುಪಾವತಿ | – | – | – | – | 04 |
| | ಒಟ್ಟು | 1590 | 8390 | 1116 | 261 | 1477 |

# ಅನುಬಂಧ-02

| ಕಛೇರಿ | ಹುದ್ದೆಯ ಪದನಾಮ | ಮಂಜೂರಾಗಿರುವಹುದ್ದೆಗಳಸಂಖ್ಯೆ | ಭರ್ತಿಯಾಗಿರುವಹುದ್ದೆಗಳಸಂಖ್ಯೆ | ಖಾಲಿಯಿರುವ ಹುದ್ದೆಗಳ ಸಂಖ್ಯೆ |
|---|---|---|---|---|
| ಕಾರ್ಮಿಕ ಅಧಿಕಾರಿ ಕಛೇರಿ, ಬೀದರ್ | ಕಾರ್ಮಿಕ ಅಧಿಕಾರಿ | 01 | 01 | - |
| | ಕಾರ್ಮಿಕ ನಿರೀಕ್ಷಕರು | 01 | 01 | - |
| | ಪ್ರಥಮ ದರ್ಜೆಸಹಾಯಕರು | 01 | 01 | - |
| | ದ್ವಿತೀಯ ದರ್ಜೆ ಸಹಾಯಕರು | 01 | 01 | - |
| | ಬೆರಳಚ್ಚುಗಾರರು | 01 | - | 01 |
| | ಗ್ರೂಪ್-ಡಿ | 02 | - | 02 |
| ಕಾರ್ಮಿಕ ನಿರೀಕ್ಷಕರ ಕಛೇರಿ, ಹುಮನಾಬಾದ | ಕಾರ್ಮಿಕ ನಿರೀಕ್ಷಕರು | 01 | 01 | - |
| | ಗ್ರೂಪ್-ಡಿ | 02 | - | 02 |
| ಕಾರ್ಮಿಕ ನಿರೀಕ್ಷಕರ ಕಛೇರಿ, | ಕಾರ್ಮಿಕನಿರೀಕ್ಷಕರು | 01 | 01 | - |
| | ಗ್ರೂಪ್-ಡಿ | 02 | - | 02 |
| ಕಾರ್ಮಿಕ ನಿರೀಕ್ಷಕರ ಕಛೇರಿ ಬಸವಕಲ್ಯಾಣ ವೃತ್ತ, | ಕಾರ್ಮಿಕ ನಿರೀಕ್ಷಕರು | 01 | 01 | - |
| ಕಾರ್ಮಿಕ ನಿರೀಕ್ಷಕರ ಕಛೇರಿ, ಔರಾದವೃತ್ತ | ಕಾರ್ಮಿಕನಿರೀಕ್ಷಕರು | 01 | - | 01 |

ಬೀದರ್ ಜಿಲ್ಲೆ ಸೇರಿದಂತೆ ಕಲ್ಯಾಣ ಕರ್ನಾಟಕ ಪ್ರಾದೇಶೀಕದ ಜಿಲ್ಲೆಗಳಲ್ಲಿ ಖಾಲಿಯಿರುವ ಕಾರ್ಮಿಕ ನಿರೀಕ್ಷಕರ 05 ಹುದ್ದೆಗಳ ಭರ್ತಿಗಾಗಿ ಈಗಾಗಲೇ ಕ್ರಮವಹಿಸಲಾಗಿದ್ದು, ಕರ್ನಾಟಕ ಲೋಕಸೇವಾ ಆಯೋಗದಿಂದ ಸದರಿ ಹುದ್ದೆಗಳ ಭರ್ತಿಗಾಗಿ ದಿನಾಂಕ: 04.12.2021ರಂದು ಸ್ಪರ್ದಾತ್ಮಕ ಪರೀಕ್ಷೆ ನಿಗಧಿಯಾಗಿರುತ್ತದೆ. ಅಲ್ಲದೆ ಇತರೆ ಹುದ್ದೆಗಳ ಭರ್ತಿಗಾಗಿ ಆರ್ಥಿಕಇಲಾಖೆಯ ಸಹಮತಿ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಆರ್ಥಿಕ ಇಲಾಖೆಯಿಂದ ಸಹಮತಿ ದೊರೆತ ಕೂಡಲೇ ಖಾಲಿ ಹುದ್ದೆಗಳನ್ನು ನೇರನೇಮಕಾತಿ ಮೂಲಕ ಭರ್ತಿಮಾಡಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು

## ಅನುಬಂಧ-03

| ಕಛೇರಿ/ ಪದನಾಮ | ಮಂಜೂರಾಗಿರುವ ಹುದ್ದೆಗಳ ಸಂಖ್ಯೆ | ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆ | ಹಾಗೂ ಖಾಲಿಯಿರುವ ಹುದ್ದೆಗಳ ಸಂಖ್ಯೆ |
|---|---|---|---|
| ಕಾರ್ಮಿಕ ಅಧಿಕಾರಿ ಕಚೇರಿ, ಬೀದರ್ | ಕಾರ್ಮಿಕ ಅಧಿಕಾರಿ-01 | 01 | - |
| | ಕಾಮಿಕ ನಿರೀಕ್ಷಕರು-01 | 01 | - |
| | ಪ್ರಥಮದರ್ಜೆ ಸಹಾಯಕರು-01 | 01 | - |
| | ದ್ವಿತಿಯದರ್ಜೆ ಸಹಾಯಕರು-01 | 01 | - |
| | ಗ್ರೂಫ್-ಡಿ-01 | 01 | - |
| ಕಾರ್ಮಿಕ ನಿರೀಕ್ಷಕರ ಕಛೇರಿ, ಹುಮನಾಬಾದ ವೃತ್ತ, | ಕಾಮಿಕ ನಿರೀಕ್ಷಕರು-01 | 01 | - |
| | ಗ್ರೂಫ್-ಡಿ-01 | - | 01 |
| ಕಾರ್ಮಿಕ ನಿರೀಕ್ಷಕರ ಕಛೇರಿ, ಭಾಲ್ಕಿ ವೃತ್ತ, | ಕಾಮಿಕ ನಿರೀಕ್ಷಕರು-01 | 01 | - |
| ಕಾರ್ಮಿಕ ನಿರೀಕ್ಷಕರ ಕಛೇರಿ, ಬಸವಕಲ್ಯಾಣ ವೃತ್ತ, | ಕಾಮಿಕ ನಿರೀಕ್ಷಕರು-01 | 01 | - |
| ಕಾರ್ಮಿಕ ನಿರೀಕ್ಷಕರ ಕಛೇರಿ, ಔರಾದ ವೃತ್ತ, | ಕಾಮಿಕ ನಿರೀಕ್ಷಕರು-01 | - | 01 |